

# ಅವತಾರ ವರಿಷ್ಠರ ದಿವ್ಯಾಸ್ತ್ರಗಳು

ಸಿ.ಎಸ್. ಮಂಗಳಮ್ಮ

ಶ್ರೀರಾಮಕೃಷ್ಣರ ಜೀವನ, ದೈವೀ ವ್ಯಕ್ತಿತ್ವ ಹಾಗೂ ಅವರ ಅವತರಣದ ವಿಶೇಷತೆಯನ್ನು ಕುರಿತು ಚಿಂತಿಸಿದಷ್ಟೂ ಅದೊಂದು ಮಾನಸಿಕ ಆರಾಧನೆಯೇ ಆಗುವುದು. ಅಂತಹ ದಿವ್ಯ ಬದುಕಿನ ಜೊತೆಯಲ್ಲಿ ಪ್ರಪಂಚದ ಬೆಳಕಾಗಿ ಬಂದ ಶ್ರೀಮಾತೆ, ಸ್ವಾಮೀಜಿ ಇವರ ವ್ಯಕ್ತತ್ವವನ್ನೂ ಇಲ್ಲಿ ವಿವರಿಸಲಾಗಿದೆ. ಲೇಖಕಿ ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಮೈಸೂರು ನಿವಾಸಿಯಾಗಿರುವ ಅವರು ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಅವರು ಉತ್ತಮ ವಾಗ್ಮಿ ಕೂಡ ಹೌದು.

**‘ಓಂ ಸ್ಥಾಪಕಾಯ ಚ ಧರ್ಮಸ್ಯ ಸರ್ವಧರ್ಮ ಸ್ವರೂಪಿಣೇ।**
**ಅವತಾರ ವರಿಷ್ಠಾಯ ರಾಮಕೃಷ್ಣಾಯ ತೇ ನಮಃ ॥’**

ವಿಶ್ವವಿಖ್ಯಾತ ವೀರಸಂನ್ಯಾಸಿ ಸ್ವಾಮಿ ವಿವೇಕಾನಂದರು ತಮ್ಮ ಗುರುಗಳನ್ನು ಸ್ಮರಿಸುತ್ತಾ ಮೇಲ್ಕಂಡ ಸ್ತವ ಕುಸುಮಾಂಜಲಿಯನ್ನು ಅರ್ಪಿಸಿದ್ದಾರೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಇತ್ತಿರುವ, ‘ಧರ್ಮಕ್ಕೆ ಗ್ಲಾನಿಯುಂಟಾದಾಗ ಅದರ ರಕ್ಷಣೆಗಾಗಿ, ಅಧರ್ಮದ ನಾಶಕ್ಕಾಗಿ ಆಗಾಗ ನಾನು ಅವತರಿಸುತ್ತೇನೆ’ ಎನ್ನುವ ಅಭಯವಾಣಿಗೆ ಶ್ರೀರಾಮಕೃಷ್ಣರ ಅವತಾರ ಉದಾಹರಣೆಯಂತಿದೆ. ಸ್ವಾಮೀಜಿಯವರು ಅವತಾರಕ್ಕೆ ಒಂದು ವಿಶೇಷಣವನ್ನು ಸೇರಿಸಿದ್ದಾರೆ, ‘ವರಿಷ್ಠಾಯ’ ಎಂದು. ವರಿಷ್ಠತೆಯ ವೈಶಿಷ್ಟ್ಯವೇನು? ಅದಕ್ಕಾಗಿ ಬಳಸಿದ ಅಸ್ತ್ರಗಳಾವುವು ಎಂಬುದನ್ನು ಅರಿಯೋಣ.

ನಮ್ಮ ಪುರಾಣಗಳಲ್ಲಿ ಬರುವ ಅವತಾರಗಳು ಪ್ರಮುಖವಾಗಿ ಹತ್ತು . ಸಾಧುಸಜ್ಜನರು, ದೇವಾಧಿದೇವತೆಗಳು ರಾಕ್ಷಸರ ಬಾಧೆಗಳಿಂದ ಕಷ್ಟನಷ್ಟಗಳಿಗೆ ಈಡಾದಾಗ ಭಗವಂತ ವಿಷ್ಣುವನ್ನು ಪರಿಹಾರಕ್ಕಾಗಿ ಪ್ರಾರ್ಥಿಸಿದರು. ಸಮಯಸಂದರ್ಭಗಳಿಗೆ ತಕ್ಕಂತೆ ವೇಷವನ್ನು ತಾಳಿ, ದುಷ್ಟಸಂಹಾರ ಮಾಡಿ, ಶಾಂತಿ ಸ್ಥಾಪನೆ ಮಾಡಿದ ಭಗವಂತ. ಸಂತ ಕಬೀರರ ಒಂದು ಹಾಡಿನ ರೀತಿ ಹೀಗಿದೆ: ಮೊದಲೆರಡು ಅವತಾರಗಳು ಜಲಚರಗಳಾಗಿ (ಮತ್ಸ್ಯ – ಕೂರ್ಮ) ಮೂರು ನಾಲ್ಕನೆಯದು ಮೃಗರೂಪ (ವರಾಹ – ನರಸಿಂಹ) ಐದು–ಆರು ಬ್ರಾಹ್ಮಣರೂಪಿನಲ್ಲಿ (ವಾಮನ–ಪರಶುರಾಮ) ಏಳು–ಎಂಟು ಕ್ಷತ್ರಿಯವೇಷದಲ್ಲಿ (ರಾಮ–ಕೃಷ್ಣ) ಒಂಭತ್ತು–ಹತ್ತು , ನಂಗಾ–ಭಿಂಗಾ (ಬುದ್ಧ–ಬೆತ್ತಲೆಯಾಗಿ, ಕಲ್ಕಿ–ವಿಚಿತ್ರ ವೇಷಧಾರಿಯಾಗಿ). ಆದರೆ ಅನೇಕ ಮಹನೀಯರು ಆಗಾಗ ಅವತರಿಸಿ ಸಮಾಜಕಲ್ಯಾಣಕಾಗಿ ಶ್ರಮಿಸಿ ಅಮರರಾಗಿ

ದ್ದಾರೆ. ಅಂಬಿಕಾತನಯದತ್ತರು 'ಗಂಗಾವತರಣ' ಕವನದಲ್ಲಿ ಪ್ರಾರ್ಥಿಸುತ್ತಾರೆ: 'ಇಳಿದು ಬಾ ತಾಯಿ, ಇಳಿದು ಬಾ' ಎಂದು. ಅದೇ ಕವನದ ಒಂದು ಸಾಲು ಹೀಗಿದೆ. 'ಅವತಾರವೆಂದೆಂಬೆ ಈ ಅಧಃಪಾತವನ್ನೆ' ಎಂದು. ಭಗವಂತ ಧರೆಗೆ ಇಳಿದು ಬಂದು, ಧರ್ಮರಕ್ಷಣೆ ಮಾಡಿ, ಜನಜೀವನವನ್ನು ಸುಗಮಗೊಳಿಸಿ, ಪತಿತ-ಪಾಮರರನ್ನು ಪಾವನಗೊಳಿಸಿ, ಉದ್ಧಾರ ಮಾಡುವ ಸಲುವಾಗಿ ಸಾಮಾನ್ಯರಲ್ಲಿ ಸಾಮಾನ್ಯರಂತೆ ಬಾಳಿ ಅಧರ್ಮ ನಾಶಮಾಡುವುದೇ ಅವತಾರದ ಮಹತ್ವವೆಂದು ತಿಳಿಸುತ್ತಾರೆ.

ಒಂದು ಸತ್ಯಕಥೆ ನೆನಪಿಗೆ ಬರುತ್ತಿದೆ. ಮೊಗಲ್ ಚಕ್ರವರ್ತಿ ಅಕ್ಬರ್, ಒಂದು ದಿನ ಬೀರಬಲ್ಲನಿಗೆ ಪ್ರಶ್ನೆ ಹಾಕುತ್ತಾನೆ. ''ಲೋಕದಲ್ಲಿ ಕಷ್ಟ-ಕೋಟಲೆಗಳಿಗೆ ಜನರು ಸಿಲುಕಿದಾಗ ದೇವರು ತಾನೇ ಏಕೆ ಅವತಾರವೆತ್ತಿ ಬರುತ್ತಾನೆ? ಪರಿವಾರ ದೇವತೆಗಳಲ್ಲಿ ಯಾರೋಬ್ಬರನ್ನಾದರೂ ಕಳುಹಿಸಬಹುದಲ್ಲವೆ?'' ಎಂದು. ಬೀರ್‌ಬಲ್ ''ಮಹಾಸ್ವಾಮಿ ಇದಕ್ಕೆ ಉತ್ತರ ತಕ್ಷಣ ನೀಡಲು ಅಸಾಧ್ಯ. ಸ್ವಲ್ಪ ಕಾಲಾವಕಾಶ ಕೊಡಿ'' ಎಂದ. ''ಸರಿ'' ಎಂದ ಅಕ್ಬರ್. ಅವನಿಗೆ ನಾನಾ ಕೆಲಸ, ಕಾರ್ಯಗಳ ನಡುವೆ ಈ ವಿಷಯ ಮರೆತೇ ಹೋಗಿತ್ತು. ಕೆಲವು ದಿನಗಳ ನಂತರ ಅಕ್ಬರ್ ಒಂದು ದಿನ ಯಮುನಾ ನದಿಯಲ್ಲಿ ನೌಕಾವಿಹಾರವನ್ನು ಏರ್ಪಡಿಸಿದ. ಬೀರಬಲ್ಲನಿಗೂ ಆಹ್ವಾನವಿತ್ತು. ಸಂಜೆ ಸಮಯಕ್ಕೆ ಸರಿಯಾಗಿ ಅಕ್ಬರ್ ಹಾಗೂ ಪರಿವಾರದವರೆಲ್ಲ ನಿಗದಿತ ಸ್ಥಳಕ್ಕೆ ಬಂದು ಸೇರಿದರು. ಆದರೆ ಬೀರಬಲ್ ಇನ್ನೂ ಬಂದಿರಲಿಲ್ಲ. ಬೀರಬಲ್ ಇಲ್ಲದಿದ್ದರೆ ಹೇಗೆ? ಅವನಿಗಾಗಿ ಕಾಯುತ್ತಿದ್ದರು. ಮುಸ್ಸಂಜೆ ಸಮಯ. ಬೀರಬಲ್ ಕೈಯಲ್ಲಿ ಏನನ್ನೋ ಎತ್ತಿಕೊಂಡು ಓಡೋಡುತ್ತ ಬಂದ. ''ಮಹಾಸ್ವಾಮಿ, ರಾಜಕುಮಾರರು ತಾವೂ ನನ್ನ ಜೊತೆ ಬರುತ್ತೇನೆಂದು ಹಠ ಹಿಡಿದಿದ್ದರಿಂದ ಅವರನ್ನು ಸುಧಾರಿಸುತ್ತ ಕರೆತರಲು ತಡವಾಯಿತು, ಕ್ಷಮಿಸಬೇಕು'' ಎನ್ನುತ್ತಾ ಆತುರಾತುರವಾಗಿ ನೌಕೆಯನ್ನು ಹತ್ತಿದ. ಅಕ್ಬರನಿಗೆ ಬೀರಬಲ್ಲನ ಆಗಮನದಿಂದ ಸಂತೋಷವಾಯಿತು. ಕೂಡಲೇ ನೌಕೆಯನ್ನು ಮುಂದೆ ಸಾಗಿಸುವಂತೆ ಅಪ್ಪಣೆ ಕೊಟ್ಟ. ಬೇರೆ ಕಡೆ ಗಮನವಿಲ್ಲ. ನೌಕೆ ಸ್ವಲ್ಪದೂರ ಸಾಗಿತಷ್ಟೆ. ಬೀರಬಲ್, ''ಹಾ! ರಾಜಕುಮಾರರು ನದಿಗೆ ಬಿದ್ದುಬಿಟ್ಟರು'' ಎಂದು ಕೂಗಿದ. ಅಕ್ಬರ್, ''ಏನಂದೆ?'' ಎನ್ನುತ್ತಾ ನದಿಯಲ್ಲಿ ಬಿದ್ದ ರಾಜಕುಮಾರನನ್ನು ರಕ್ಷಿಸಲು ತಾನೇ ನದಿಗೆ ಧುಮುಕಿದ! ಬೀರಬಲ್ ತೋರಿಸಿದ ಸ್ಥಳದಲ್ಲಿ ಹುಡುಕಿ, ಮೇಲಕ್ಕೆ ತಂದ. ಆದರೆ ಅದು ಒಂದು ಮೇಣದ ಬೊಂಬೆಯಾಗಿತ್ತು! ಅಕ್ಬರ್ ಸಿಟ್ಟಿನಿಂದ, ''ಇದೇನು ಬೀರಬಲ್? ನನ್ನೊಂದಿಗೆ ಹುಡುಗಾಟ?'' ಎಂದಾಗ ಬೀರಬಲ್ ಸಾವಧಾನವಾಗಿ, ''ಮಹಾಸ್ವಾಮಿ, ಅಂದಿನ ನಿಮ್ಮ ಪ್ರಶ್ನೆಗೆ ಇದು ಉತ್ತರ. ಇಲ್ಲಿ ನಿಮ್ಮ ಸೇವಕರು ಇದ್ದರೂ ಸಹ, 'ರಾಜಕುಮಾರರು ಬಿದ್ದುಬಿಟ್ಟರು' ಎಂದಾಗ ನೀವೇಕೆ ನೀರಿಗೆ ಧುಮುಕಿ ಬಿಟ್ಟಿರಿ? ನಿಮ್ಮ ಸಂತಾನದ ರಕ್ಷಣೆಗಾಗಿ ಅಲ್ಲವೆ? ಹಾಗೆಯೇ ಭಗವಂತ ತನ್ನ ಸಂತಾನದ ಕಷ್ಟವನ್ನು ಪರಿಹರಿಸಿ, ರಕ್ಷಿಸುವುದಕ್ಕಾಗಿ ತಾನೇ ಅವತರಿಸಿ ಬರುತ್ತಾನೆ'' ಎಂದು ಉತ್ತರಿಸಿದ.

ಶ್ರೀರಾಮಕೃಷ್ಣರ ಅವತಾರದ ವಿಶೇಷತೆ ಇಲ್ಲಿವೆ. ಭಾರತದಲ್ಲಿದ್ದ ಅಂದಿನ ಸಾಮಾಜಿಕ, ಧಾರ್ಮಿಕ ಗೊಂದಲದ ಪರಿಹಾರಕ್ಕಾಗಿ ತಾನೇ ಮುನ್ಸೂಚನೆ ಕೊಟ್ಟು, ಖುದಿರಾಮ ಚಟ್ಟೋಪಾಧ್ಯಾಯ ಮತ್ತು ಚಂದ್ರಮಣೀ ದೇವಿ ದಂಪತಿಗಳ ಮಗನ ರೂಪದಲ್ಲಿ ಜನಿಸಿದ, ಗಯಾವಿಷ್ಣು ಗದಾಧರ! ಇವರಲ್ಲಿ ಬಾಲ್ಯದಿಂದಲೇ ಎರಡು ವಿಶೇಷತೆಗಳನ್ನು ಕಾಣುತ್ತೇವೆ. ಪ್ರಕೃತಿಯ ಸೌಂದರ್ಯದಲ್ಲಿ ಮೈಮರೆತು, ಆನಂದವನ್ನು ಅನುಭವಿಸುವುದು, ಮತ್ತೊಂದು ತಮ್ಮ ಸರಳ ಭಾಷೆಯಲ್ಲಿ ಪಂಡಿತೋತ್ತಮರ ವಾದ-ವಿವಾದಗಳಿಗೆ ಪರಿಹಾರ ಸೂಚಿಸುತ್ತಿದ್ದುದು. ಇವೇ ಮುಂದೆ ಧರ್ಮಸಂಸ್ಥಾಪನೆಗೆ ಪ್ರಯೋಗಿಸಿದ ದಿವ್ಯಾಸ್ತ್ರಗಳಾದುವೆನ್ನಬಹುದು.

ಯುವಕ ಶ್ರೀರಾಮಕೃಷ್ಣರು ತಮ್ಮ ಅಣ್ಣನೊಡನೆ ಕೋಲ್ಕತ್ತಕ್ಕೆ ಬಂದರು. ಅವರು ಸ್ಪಷ್ಟವಾಗಿ ಹೇಳುತ್ತಾರೆ, ''ಮೂರು ಕಾಸು ಸಂಪಾದನೆಯ ವಿದ್ಯೆ ನನಗೆ ಬೇಡ. ವಿಶ್ವವನ್ನೇ ಆವರಿಸುವ 'ಶಕ್ತಿ'ಯನ್ನು ಅರಿಯಲು ಸಾಧನೆ ಮಾಡುತ್ತೇನೆ'' ಎಂದು. ಅದಕ್ಕೆ ತಕ್ಕಂತೆ ರಾಣಿ ರಾಸಮಣಿ ಕಟ್ಟಿಸಿದ ಭವತಾರಿಣಿ ದೇವಾಲಯದ ಅರ್ಚಕರಾಗಿ ಸೇವೆ ಸಲ್ಲಿಸುವ ಅವಕಾಶ ತಾನಾಗಿಯೇ ಒದಗಿಬಂತು. ಸುಮಾರು ಹನ್ನೆರಡು ವರ್ಷಗಳ ಕಠಿಣ ಸಾಧನೆಯಿಂದ ಅವರು ಸತ್ಯಸಾಕ್ಷಾತ್ಕಾರವನ್ನು ಪಡೆದರು. 'ಭವತಾರಿಣಿ' ಅವರಿಗೆ ಶಿಲಾಮೂರ್ತಿಯಲ್ಲ, ಚಿನ್ಮಯಿ! ಅವರು ತಾಯಿಯ ಮಡಿಲಿನ ಶಿಶುವಾದರು! ವಿಶ್ವವೆಲ್ಲವೂ ಒಂದೇ ಶಕ್ತಿಯಿಂದ ಆವೃತವಾಗಿದೆ. ಪ್ರತಿಯೊಂದರಲ್ಲಿಯೂ 'ತಾಯಿ'ಯನ್ನೇ ಕಂಡರು. 'ಜೀವ-ಶಿವ' ಅಭೇದವೆಂದರಿತರು. 'ದೇವನೊಬ್ಬ-ನಾಮ ಹಲವು' ಎಂದು ಖುದ್ದಾಗಿ, ಸಾಧಿಸಿ ಅನುಭವಿಸಿದರು. ಇಂತಹ ಉನ್ಮಾದದ ಅವಸ್ಥೆಯನ್ನು ಆಗಿನ ಜನರು ತಮ್ಮದೇ ದೃಷ್ಟಿಕೋನದಲ್ಲಿ ನೋಡಿ, ''ಹುಚ್ಚು ಹಿಡಿದಿದೆ, ಹುಚ್ಚು ಪೂಜಾರಿ'' ಎಂದು ಕರೆದರು. ದೇವಸ್ಥಾನದ ಮೇಲ್ವಿಚಾರಕ ಮಥುರನಾಥ ಮಾತ್ರ ಇದನ್ನು ಒಪ್ಪಲಿಲ್ಲ. ಶ್ರೀರಾಮಕೃಷ್ಣರಲ್ಲಿ ಅವನಿಗೆ ಶ್ರದ್ಧಾ-ಭಕ್ತಿಗಳಿದ್ದವು.

ಇವರ ವಿಶೇಷತೆಯನ್ನು ಬಹಿರಂಗಪಡಿಸುವ ಸಲುವಾಗಿ ಎಂಬಂತೆ ಭೈರವಿ ಬ್ರಾಹ್ಮಣಿಯೊಬ್ಬಳು ದಕ್ಷಿಣೇಶ್ವರಕ್ಕೆ ಬಂದಳು. ಶ್ರೀರಾಮಕೃಷ್ಣರ ನಡವಳಿಕೆಗಳನ್ನು ಕಂಡು, 'ಇದು ಹುಚ್ಚಲ್ಲ. ಅವತಾರಪುರುಷನ ಲಕ್ಷಣ' ಎಂದು ಪಂಡಿತರ ಸಭೆಯಲ್ಲಿ ಆಕೆ ಶಾಸ್ತ್ರಾಧಾರ ಸಹಿತವಾಗಿ ಘೋಷಿಸಿದಳು. ಅನಂತರ ಪರೀಕ್ಷಿಸಲೋ ಅಥವಾ ಸಂಶಯ ಪರಿಹಾರಕ್ಕಾಗಿಯೋ ಪಂಡಿತರು, ವಿದ್ವಾಂಸರು, ಯುವಕರು, ಹಾಗೂ ಸಮಾಜದ ಎಲ್ಲ ವರ್ಗದ ಜನರೂ ದಕ್ಷಿಣೇಶ್ವರದ ಯೋಗೀಂದ್ರನ ಬಳಿಗೆ ಬಂದರು. ತಕ್ಕ ಸಮಾಧಾನವನ್ನೂ ಪಡೆದರು. ಸನಾತನ ಧರ್ಮದ ಮೇಲೆ

ಮುಸುಕಿದ್ದ ಧೂಳನ್ನು ಝಾಡಿಸಿ, ನಿಜವಾದ ಧರ್ಮವೇನೆಂಬುದನ್ನು ಅರಿತರು. 'ಧರ್ಮ'ದ ಅರ್ಥ ಸಂಕುಚಿತವಾಗಿ, ಮತ, ಜಾತಿ, ಪಂಗಡಗಳಲ್ಲಿ ಹಂಚಿಹೋಗಿತ್ತು. ಧರ್ಮದ ಹೆಸರಿನಲ್ಲಿ ಸಂಘರ್ಷ ನಡೆದು ಜನಜೀವನ ಅಸ್ತವ್ಯಸ್ತವಾಗಿತ್ತು. ಸಾಮಾನ್ಯ ಜನರ ಬದುಕು ಕ್ರಿಮಿಕೀಟಗಳಿಗಿಂತ ಕಡಿಮೆಯಾಗಿತ್ತು. ಅಧರ್ಮ ಖಂಡನೆಗೆ, ಧರ್ಮಸಂಸ್ಥಾಪನೆಗೆ ಅವತಾರಪುರುಷರಾದ ಶ್ರೀರಾಮಕೃಷ್ಣರು ತಾವು ಸಾಧಿಸಿ ಸಾಕ್ಷಾತ್ಕರಿಸಿಕೊಂಡಿದ್ದ, ಎರಡು ದಿವ್ಯ ಅಸ್ತ್ರಗಳನ್ನು ಪ್ರಯೋಗಿಸಿದರು. 'ದೇವನೊಬ್ಬ ನಾಮ ಹಲವು'; 'ಜೀವಸೇವೆಯೇ ಈಶಸೇವೆ' — ಇವು ಆಗಿನ ಸಾಮಾಜಿಕ ವ್ಯವಸ್ಥೆಯನ್ನು ಸರಿಪಡಿಸುವ ದಿವ್ಯಮಂತ್ರಗಳಾದವು. ಶ್ರೀರಾಮಕೃಷ್ಣರು 'ಸರ್ವಧರ್ಮ ಸಮನ್ವಯಾಚಾರ್ಯ'ರೆನಿಸಿ, ಸಮಾಜಕಲ್ಯಾಣಕ್ಕೆ ನೆರವಾದರು; ಧರ್ಮೋದ್ಧಾರಕರೆನಿಸಿದರು.

ಯಾವುದೇ ವಿಶೇಷ ಆಡಂಬರಗಳಿಲ್ಲ, ವಿಶೇಷ ವೇದಿಕೆ ಇಲ್ಲ. ದಕ್ಷಿಣೇಶ್ವರ ಗುಡಿಯಲ್ಲಿಯೇ ವೇದ ವೇದಾಂತಗಳ ಸಾರವನ್ನು ಶ್ರೀಸಾಮಾನ್ಯನಿಗೇಕೆ, ಪಾಮರನಿಗೂ ಮನ ಮುಟ್ಟುವಂತೆ ತಿಳಿಸಿದರು. ಅಲ್ಲಿಗೆ ಬಂದವನು ಮಹಾಮೇಧಾವಿ, ಆಂಗ್ಲಭಾಷಾ ಪರಿಣತನಾಗಿದ್ದ, ಬ್ರಹ್ಮಸಮಾಜದ ಸದಸ್ಯನಾಗಿದ್ದ. 'ದೇವರಿದ್ದಾನೆಯೆ?' ಎಂಬ ಸಂದೇಹದೊಂದಿಗೆ ಬಂದ ನರೇಂದ್ರ! ಶ್ರೀರಾಮಕೃಷ್ಣರ ನಡೆ-ನುಡಿಗಳಿಂದ ಆಕರ್ಷಿತನಾದ. 'ಜೀವ-ಶಿವ'ರ ಅಭೇದವನ್ನರಿತ. 'ಜೀವ ಸೇವೆ-ಶಿವಸೇವೆ' ಎಂಬ ಗುರುವಾಕ್ಯಕ್ಕೆ ಮಾರುಹೋದ. ಗುರುವಿನ ಆಣತಿಯಂತೆ ಸಂಘ ಸ್ಥಾಪಿಸಿ, ಇಡೀ ವಿಶ್ವಕ್ಕೇ ಗುರುವಿನ ಸಂದೇಶವನ್ನು ಸಾರಿ, ಶ್ರೀರಾಮಕೃಷ್ಣರ ಅವತಾರ ವಿಶೇಷತೆಯನ್ನು ಸಾರಿ, ಅವರನ್ನು 'ಅವತಾರ ವರಿಷ್ಠ' ಎಂದು ಸ್ತುತಿಸಿದ.

ಶ್ರೀರಾಮಕೃಷ್ಣರ ಅವತಾರ ವಿಶೇಷತೆಯನ್ನು ಸಾರುವ, ಶ್ರೀರಾಮಕೃಷ್ಣರ ಬಳಿಗೆ ಬಂದ ಮಾಸ್ಟರ್ ಮಹೇಂದ್ರನಾಥ ಗುಪ್ತರ ದಿನಚರಿಯ ಬರವಣಿಗೆ ಮಹತ್ತಾದದ್ದು. ಸುಮಾರು ಐದು ವರ್ಷಗಳ ಕಾಲ ಪ್ರತ್ಯಕ್ಷವಾಗಿ ತಾನು ಕಂಡು ಅನುಭವಿಸಿದುದನ್ನು, ದಿನಾಂಕಗಳೊಡನೆ ಬರೆದಿಟ್ಟು ಜಗತ್ತಿನ ಕಲ್ಯಾಣಕ್ಕೆ ನೆರವಾಗಿದ್ದಾರೆ. ಬಂಗಾಳಿ ಭಾಷೆಯಲ್ಲಿದ್ದುದನ್ನು ಕನ್ನಡ ಭಾಷೆಗೆ ಅನುವಾದಗೊಂಡು, 'ವಚನವೇದ' ಎಂಬ ಸಾರ್ಥಕ ನಾಮದೊಂದಿಗೆ ಈ ದಿವ್ಯಗ್ರಂಥವು ಶ್ರೀರಾಮಕೃಷ್ಣರ ಅವತಾರ ವಿಶೇಷತೆಯನ್ನು ಸಾರಿ ಮೆರೆಯುತ್ತಿದೆ, ಧರ್ಮರಕ್ಷಣೆ ಮಾಡುತ್ತಿದೆ ಎನ್ನಬಹುದು. ರಾಷ್ಟ್ರಕವಿ ಕುವೆಂಪು ಅವರು 'ವಚನವೇದ' ವನ್ನು 'ಕರತಲ ದೇಗುಲ'ವೆಂದಿದ್ದಾರೆ. ಈ ದೇಗುಲದೊಳಗೆ ಹೊಕ್ಕಾಗ ಶ್ರೀರಾಮ ಕೃಷ್ಣರ ನುಡಿಗಳು ಮನುಷ್ಯನ ಸಾರ್ಥಕ ಬದುಕಿಗೆ ಮಾರ್ಗ ದರ್ಶನ ಮಾಡುವುದರಲ್ಲಿ ಸಂಶಯವಿಲ್ಲ.

ಇಂದು ನಮಗೆ ಶ್ರೀರಾಮಕೃಷ್ಣರ ಎರಡು ಭಾವಚಿತ್ರಗಳು ಲಭ್ಯವಿವೆ. ಒಂದು ಧ್ಯಾನಸ್ಥಿತ ಮೂರ್ತಿ! ಪ್ರತಿಯೊಬ್ಬರಿಗೂ ಆತ್ಮೋದ್ಧಾರಕ್ಕೆ ಜಪ-ತಪ ಸಾಧನೆಗಳು ಆವಶ್ಯಕವೆನ್ನುವುದನ್ನು ಸೂಚಿಸುವಂತಿದೆ ಈ ಚಿತ್ರ. ಇದು ಆರಾಧನಾಮೂರ್ತಿ! ಇನ್ನೊಂದು ಸಮಾಧಿಯಲ್ಲಿ ನಿಂತಿರುವುದು. ಹಸನ್ಮುಖ, ಅರ್ಧ ನಿಮೀಲಿತ ನೇತ್ರ, ಶುಭ್ರವಸ್ತ್ರಧಾರಿ, ಬಲಗೈ ಮೇಲೆತ್ತಿದ್ದಾರೆ. ಎಡಗೈ ಸೊಂಟದ ಬಳಿ ಅಗಲಿಸಿದಂತಿದೆ. ಉಟ್ಟಿರುವ ಧೋತ್ರವನ್ನು ಮೇಲೆತ್ತಿ, ಸೊಂಟಕ್ಕೆ ಪಟ್ಟಿಕಟ್ಟುವಂತೆ ಕಟ್ಟಿದ್ದಾರೆ. ''ಜೀವ ಸೇವೆಗೆ ಸೊಂಟಕಟ್ಟಿ ಏಳಿ!'' ಎನ್ನುತ್ತಿದ್ದಾರೆನೋ ಎಂಬಂತಿದೆ. ತಳಮಟ್ಟದಿಂದ ಹಂತ ಹಂತವಾಗಿ ಸಾರ್ಥಕ ಬದುಕನ್ನೇ ನಡೆಸಿ ದೇವತ್ವದ ಕಡೆಗೆ ಸಾಗಿರಿ ಎಂಬ ಸಂದೇಶ ನೀಡುವಂತಿರುವ ಅವರ ಬಲಕೈ ಮೇಲೆತ್ತಿದೆ. ಶ್ರೀರಾಮಕೃಷ್ಣ ಮಹಾಸಂಘದ ಧ್ಯೇಯ ವಾಕ್ಯಗಳಾದ 'ಆತ್ಮನೋ ಮೋಕ್ಷಾರ್ಥಂ! ಜಗದ್ಧಿತಾಯ ಚ' ಇದಕ್ಕೆ ಸಂಬಂಧಪಟ್ಟಂತಿವೆ ಈ ಎರಡೂ ಚಿತ್ರಗಳು.

ಸ್ವಾಮಿ ವಿವೇಕಾನಂದರ ಸ್ತುತಿಯಲ್ಲಿನ 'ಅವತಾರ ವರಿಷ್ಠ' ಎಂಬುದಕ್ಕೆ ಸ್ವಾಮೀಜಿಯವರಿಗೇ, ಶ್ರೀರಾಮಕೃಷ್ಣರು ತಾವು ಅವತಾರ ಪುರುಷರೆಂಬುದನ್ನು ಪ್ರತ್ಯಕ್ಷವಾಗಿ ತಿಳಿಸಿದ ಘಟನೆ ವಿಶೇಷವಾದದ್ದು. ಶ್ರೀರಾಮಕೃಷ್ಣರ ಮಹಾಸಮಾಧಿಗೆ ಒಂದೆರಡು ದಿನ ಮುಂಚೆ ನರೇಂದ್ರನಾಥ, ಯಾರನ್ನು ತನ್ನ ಗುರುವೆಂದು ಸ್ವೀಕರಿಸಿದ್ದನೋ, ಅವರ ಬಗ್ಗೆ ಮನದಲ್ಲಿ ಒಂದು ಸಂದೇಹ ಮೂಡಿತು. 'ಇಂತಹ ದಾರುಣ ಸ್ಥಿತಿಯಲ್ಲಿಯೂ ತಮ್ಮನ್ನು ಅವತಾರ ಪುರುಷರೆಂದು ಇವರು ಸಾರಬಲ್ಲರೆ?' ಎಂದು. ಮಾತನಾಡದ ಸ್ಥಿತಿಯಲ್ಲಿದ್ದ ಶ್ರೀರಾಮಕೃಷ್ಣರು ಬಹಳ ಕಷ್ಟದಿಂದ ಹೇಳುತ್ತಾರೆ: 'ಹಿಂದೆ ಯಾರು ರಾಮನಾಗಿದ್ದನೋ, ಕೃಷ್ಣನಾಗಿದ್ದನೋ ಅವನೇ ಈಗ ರಾಮಕೃಷ್ಣನಾಗಿದ್ದಾನೆ' ಎಂದು. ತನ್ನ ಸಂದೇಹಕ್ಕೆ ನಾಚಿಕೆಪಟ್ಟುಕೊಂಡು, ಶ್ರೀರಾಮಕೃಷ್ಣರ ಅವತಾರಕಾರ್ಯವನ್ನು ಮನಸ್ಸಿನಲ್ಲಿಯೇ ಚಿಂತಿಸತೊಡಗಿದನು. ಅವರ ಸಂದೇಶವನ್ನು ಜಗತ್ತಿಗೇ ಸಾರಿ, ಅವರ ವರಿಷ್ಠತೆಯನ್ನು ಎತ್ತಿಹಿಡಿದು, ಸ್ತುತಿಸಿದನು.

ಶ್ರೀರಾಮಕೃಷ್ಣರು 'ಸರ್ವಧರ್ಮಸಮನ್ವಯ' ಹಾಗೂ 'ಜೀವ ಸೇವೆ-ಶಿವಸೇವೆ'ಯ ಬೀಜವನ್ನು ತಮ್ಮ ಅವತಾರದಲ್ಲಿ ಬಿತ್ತಿದರು. ಶ್ರೀರಾಮಕೃಷ್ಣರ ಸಹಧರ್ಮಿಣಿಯಾಗಿ, ಅವರ ಅವತಾರ ಕಾರ್ಯಕ್ಕೆ ಬೆಂಬಲಿಸಿ, ಜಗನ್ಮಾತೆಯೆನಿಸಿ, ಕರ್ಮಯೋಗಿನಿಯಾಗಿ, ಶ್ರೀರಾಮಕೃಷ್ಣ ಮಹಾಸಂಘದ ಮೂಲಕ ವಿಶ್ವಕ್ಕೆ, ಸಂಘದ ವೃಕ್ಷಕ್ಕೆ ನೀರೆರೆದು ಪೋಷಿಸಿದರು ಶ್ರೀಮಾತೆ ಶಾರದಾದೇವಿ. ಸ್ವಾಮಿ ವಿವೇಕಾನಂದರು ಜಗತ್ತಿನೆಲ್ಲೆಡೆ ತಮ್ಮ ಗುರುವಿನ ಸಂದೇಶವನ್ನು ಸಾರಿ, ಅವರ ದಿವ್ಯಮಂತ್ರಗಳಾದ 'ದೇವನೊಬ್ಬ ನಾಮ ಹಲವು', 'ಜೀವಸೇವೆ-ಶಿವಸೇವೆ'ಯ ಮೂಲಕ ಅವತಾರ ವೈಶಿಷ್ಟ್ಯತೆಯನ್ನು ಹರಡಿದ್ದಾರೆ. ಇಂದು ವಿಶ್ವದಾದ್ಯಂತ ವಿಶಾಲವಾಗಿ ಹರಡಿರುವ ಸಂಘ, ತಮ್ಮ ಕಾರ್ಯಗಳ ಮೂಲಕ ಶ್ರೀರಾಮಕೃಷ್ಣರ ಅವತಾರ ವಿಶೇಷತೆಯನ್ನು ಸಾರಿ ಸೇವೆ ಸಲ್ಲಿಸುತ್ತಿದೆ. ಕಾಲಕ್ಕೆ ತಕ್ಕಂತೆ ಧರ್ಮೋದ್ಧಾರಕ್ಕಾಗಿ ಅವತಾರ ವೈಶಿಷ್ಟ್ಯತೆ!

**'ಅವತಾರ ವರಿಷ್ಠಾಯ ರಾಮಕೃಷ್ಣಾಯ ತೇ ನಮಃ'**